

ಬದುಕು ಬದಲಿಸಿದ

# ಭಾವೇಶ್ ಭಾಟಿಯಾ

## ಅಂಧ ಉದ್ಯೋಗ ಜನಕನ ಸಾಹಸಗಾಥೆ

■ ನೇಮಿಚಂದ್ರ

ಕಲೆ: ಮನೋಹರ ಕೆ. ಆಚಾರ್ಯ

## ಯಶಸ್ಸಿನ ಮುಂದುವರೆದ ಜೈತ್ರಯಾತ್ರೆ

ಗುಜರಾತಿನ ಪ್ರದರ್ಶನದ ಅವಕಾಶಗಳು ಭಾವೇಶ್ ಅವರಿಗೆ ಬಹಳಷ್ಟನ್ನು ಕಲಿಸಿದವು. ಪ್ರದರ್ಶನದಲ್ಲಿ ಭಾಗವಹಿಸಲು ಹೆಸರನ್ನು ನೋಂದಾಯಿಸುವುದರಿಂದ ಹಿಡಿದು ಹೊಸ ಹೊಸ ಜಾಗಗಳಲ್ಲಿ ಪ್ರದರ್ಶನವನ್ನು ನಿಭಾಯಿಸುವುದು ಹೇಗೆಂದು ಅರಿತರು. ಈ ಪ್ರದರ್ಶನಗಳು ಒಂದು ದಿನ ಇರಬಹುದು, ಎರಡು ದಿನ ಇರಬಹುದು, ಪೂರಾ ವಾರ ನಡೆಯುವಂಥವೂ ಆಗಿರಬಹುದು. ಮಹಾಬಲೇಶ್ವರದಿಂದ ಎಲ್ಲಿಯಾದರೂ ಹೋಗಿ ಪ್ರದರ್ಶನ ಹಾಕಬೇಕು ಎಂದರೆ, ಎಲ್ಲಕ್ಕಿಂತ ಮೊದಲು ಸಾರಿಗೆ ಖರ್ಚು, ವಸತಿಯ ಖರ್ಚು, ಊಟ ತಿಂಡಿಯ ಖರ್ಚು, ಅದರಾಚೆಗೆ ಸ್ಟಾಲ್‌ನ ಬಾಡಿಗೆಯನ್ನೂ ಲೆಕ್ಕ ಮಾಡಿಕೊಳ್ಳಬೇಕಿತ್ತು. ಅಲ್ಲಿ ಮಾರಾಟವಾಗಿ ಬರುವ ಹಣದಲ್ಲಿ ಈ ಎಲ್ಲ ಖರ್ಚುಗಳನ್ನು ಕಳೆದು ಉಳಿದಿದ್ದರಲ್ಲಿ ತಮ್ಮ ಲಾಭವನ್ನು ಹುಡುಕಬೇಕಿತ್ತು. ಈ ಎಲ್ಲ ಅನುಭವದಿಂದಾಗಿ, ಭಾವೇಶ್ ಅವರು ಆಯೋಜಕರಲ್ಲಿ, ಸ್ಟಾಲ್‌ನ ಬಾಡಿಗೆಯಲ್ಲಿ ಒಂದಿಷ್ಟು ರಿಯಾಯಿತಿ ನೀಡುವಂತೆ ಪ್ರಾರ್ಥಿಸುತ್ತಿದ್ದರು. ಅನೇಕ ಬಾರಿ ಆಯೋಜಕರು ಒಪ್ಪುತ್ತಿದ್ದರು. ಮೆಲ್ಲನೆ ಅವರಿಗೆ ಅರಿವಾಯಿತು, ಎಲ್ಲಿ ದೊಡ್ಡ ದೊಡ್ಡ ಪ್ರದರ್ಶನಗಳನ್ನು ಹಾಕುತ್ತಾರೋ, ಅಲ್ಲಿ ಲಕ್ಷಗಟ್ಟಲೆ, ಕೆಲವೊಮ್ಮೆ ಕೋಟಿಗಟ್ಟಲೆ ಹಣವನ್ನು ಈ ಪ್ರದರ್ಶನಗಳನ್ನು ಯಶಸ್ವಿಯಾಗಿಸಲು ತೊಡಗಿಸುತ್ತಾರೆ. ಈ ಪ್ರದರ್ಶನಗಳಲ್ಲಿ ಒಂದಿಷ್ಟು ಕಾರ್ಪೊರೇಟ್ ಸೋಷಿಯಲ್ ರೆಸ್ಪಾನ್ಸಿಬಿಲಿಟಿ (ಸಿ.ಎಸ್.ಆರ್.) ಕೆಲಸಗಳೂ ನಡೆಯುವುದರಿಂದ ದೊಡ್ಡ ದೊಡ್ಡ ಆಯೋಜಕರ ಮಾನವ ಸಂಪನ್ಮೂಲ (ಎಚ್.ಆರ್.) ವಿಭಾಗದ ಕಡೆಯಿಂದ ನಾಲ್ಕೈದು ಸ್ಟಾಲ್‌ಗಳನ್ನು ಬಾಡಿಗೆ ಇಲ್ಲದೆಯೂ ನೀಡುತ್ತಾರೆ. ಅದಕ್ಕಿರುವ ಷರತ್ತು ಇಷ್ಟೆ, ಈ ರೀತಿ ಸ್ಟಾಲ್ ಹಾಕುವವರು ನೋಂದಾಯಿಸಿದ ಸರ್ಕಾರೇತರ ಸಂಸ್ಥೆ (ಎನ್.ಜಿ.ಓ.) ಆಗಿರಬೇಕು. ಯಾವುದೇ ನೋಂದಾಯಿಸಿದ ಎನ್.ಜಿ.ಓ. ಈ ಪ್ರದರ್ಶನಗಳಲ್ಲಿ ಸ್ಟಾಲ್ ಕೇಳಿದಾಗ, ಅವರಿಗೆ ಸಿ.ಎಸ್.ಆರ್. ಕಡೆಯ ಸ್ಟಾಲ್ ಕೊಡಲಾಗುತ್ತದೆ. ಭಾವೇಶ್ ಈ ಪ್ರದರ್ಶನಗಳಲ್ಲಿ ಹೀಗೆ ಅನೇಕ ವಿಷಯಗಳನ್ನು ಅರಿತರು.

ಆ ಸಿ.ಎಸ್.ಆರ್.ನ ಲಾಭ ಭಾವೇಶ್ ಅವರ ಅಂಧ ಮಿತ್ರರ ತಂಡಕ್ಕೆ ಸಿಗತೊಡಗಿತು. ಸಿಂದೋಡಾದಲ್ಲಿ ಆರಂಭವಾದ ಮೋಂಬತ್ತಿಯ